**IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ**

**OS No.982/2022**
**PW.1**

**ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿಪರ ಶ್ರೀಃ YGG ವಕೀಲರಿಂದ.**

**ಸಾಕ್ಷಿಗೆ ಮರಾಠಿ ಭಾಷೆ ಬರುತಿದ್ದು ನ್ಯಾಯಾಲಯಕ್ಕೆ ಸದರಿ ಭಾಷೆ ಅರ್ಥವಾಗದ ಕಾರಣ ವಕೀಲರಾದ ಶ್ರೀ:MTS ರವರನ್ನು ನೇಮಿಸಿ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಹೇಳಿಕೆ ಪಡೆದುಕೊಳ್ಳಲಾಯಿತು. ಪ್ರತಿವಾದಿಯು ತರ್ಜುಮೆದಾರರರಿಗೆ ತರ್ಜುಮೆದಾರರ ಫೀ ರೂ.300/- ನೀಡಲು ಅದೇಶಿಸಿದೆ.**

ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಸಂಖ್ಯೆ 982/2022ಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ. ನಾನು ವಾದಿಗಳ ಎಲ್ಲರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ಉಳಿದ ವಾದಿಗಳು ಸಾಕ್ಷಿ ಹೇಳಲು ನನಗೆ ಅಧಿಕಾರ ನೀಡಿಲ್ಲ. ನನ್ನ ಮುಖ್ಯ ಪ್ರಮಾಣಪತ್ರದಲ್ಲಿ ಉಳಿದ ವಾದಿಗಳು ಸಾಕ್ಷಿ ಹೇಳಲು ನನಗೆ ಹೇಳಿರುತ್ತಾರೆ ಎಂದು ಎಲ್ಲೂ ಬರೆದಿಲ್ಲ ಎಂದರೆ ಸರಿ. ನಮ್ಮ ದಾವೆ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವೆ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾವೇ ನೀಡಿರುತ್ತೇವೆ. RSA No.36/1ನೇದರ ಕುರಿತು ದಾವೆಯನ್ನು ಸಲ್ಲಿಸಿರುತ್ತೇವೆ. ಸರ್ವೇ ನಂ.36ರಲ್ಲಿ ಒಟ್ಟು 2 ಹಿಸ್ಸೆಗಳು ಆಗಿರುತ್ತವೆ. ಸರ್ವೇ ನಂ.36/1ರ ಒಟ್ಟು ವಿಸ್ತೀರ್ಣ 12 ಎಕರೆ 18 ಗುಂಟೆ ಇರುತ್ತದೆ. ಇದೇ ಪ್ರಕಾರ ಸರ್ವೇ ನಂ.36/2ರ ಒಟ್ಟು ವಿಸ್ತೀರ್ಣ 4 ಎಕರೆ ಇರುತ್ತದೆ. ಸರ್ವೇ ನಂ.36/1ಮತ್ತು ಸರ್ವೇ ನಂ.36/2 ಪರಸ್ಪರ ಹೊಂದಿಕೊಂಡಿರುತ್ತವೆ ಎಂದರೆ ಸರಿ. ಸರ್ವೇ ನಂ.36/1ರ ಒಟ್ಟು ವಿಸ್ತೀರ್ಣ 12 ಎಕರೆ 25 ಗುಂಟೆ ಇರುತ್ತದೆ ಎಂದರೆ ಅದರಲ್ಲಿ 7 ಗುಂಟೆ ಕರಾಬು ಇರುತ್ತದೆ ಎಂದು ನುಡಿಯುತ್ತಾರೆ. RSA No.36/1ರ ಆಸ್ತಿಯು ಪ್ರತಿವಾದಿಗಳಿಗೆ ಪಿತ್ರಾರ್ಜಿತ ಆಸ್ತಿಯಾಗಿ ಬಂದಿರುತ್ತದೆ ಎಂದರೆ

ಸರಿಯಲ್ಲ. RSA No.36/1ರ 12 ಎಕರೆ 25 ಗುಂಟೆ ಪ್ರತಿವಾದಿಯರಿಗೆ ದಾವಾ ಆಸ್ತಿಯು ನ್ಯಾಯಾಲಯದ ದಾವೆಯಿಂದ ಬಂದಿರುತ್ತದೆ. ನ್ಯಾಯಾಲಯದ ಯಾವ ದಾವೆಯಿಂದ ಸದರಿ ಆಸ್ತಿ ಬಂದಿರುತ್ತದೆ ಎಂದು ದಾಖಲೆಯನ್ನು ಹಾಜರು ಪಡಿಸಿಲ್ಲ ಆದರೆ ಅಷ್ಟೊಂದು ಮಾಹಿತಿ ನನಗೆ ಇಲ್ಲ. ನಮ್ಮದು ಮತ್ತು ಪ್ರತಿವಾದಿಗಳ ಮಧ್ಯ ಒಂದು ದಾವೆ ಇದ್ದು ಆ ದಾವೆ ಮೂಲಕ ಸದರಿ ಆಸ್ತಿ ಬಂದಿರುತ್ತದೆ ನಾನು ಹೇಳುತಿದ್ದೇನೆ. ಆದಾವೆ ನಂಬರಿನ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವಾ ನ್ಯಾಯಾಲಯದಲ್ಲಿ ದಾವೆ ಇತ್ತು ಎಂದು ನನಗೆ ಮಾಹಿತಿ ಇಲ್ಲ. ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆ ದಾವೆಯ ಬಗ್ಗೆ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ಕ್ಷೇತ್ರ 1 ಎಕರೆ 10 ಗುಂಟೆಯಾಗಿರುತ್ತದೆ. RSA No.36/1ರ 12 ಎಕರೆ 25 ಗುಂಟೆಯ ಪೈಕಿ ಪೂರ್ವ ದಿಕ್ಕಿಗೆ ಸದರಿ 1 ಎಕರೆ 10 ಗುಂಟೆ ದಾವಾ ಆಸ್ತಿ ಬರುತ್ತದೆ. ಪುನಹ ಸಾಕ್ಷಿ ನುಡಿಯುತ್ತಾರೆ ಸದರಿ ದಾವಾ ಆಸ್ತಿ ಪೂರ್ವ ಮತ್ತು ಉತ್ತರ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪೂರ್ವ ಮತ್ತು ಉತ್ತರ ದಿಕ್ಕಿಗೆ ಬರುತ್ತದೆ ಎಂದು ದಾವೆಯಲ್ಲಾಗಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲಿ ಎಲ್ಲೂ ನಮೂದಿಸಿಲ್ಲ ಎಂದರೆ ಸರಿ. RSA No.36/1ರ ಒಟ್ಟು 12 ಎಕರೆ 25 ಗುಂಟೆ ಕ್ಷೇತ್ರ ಪ್ರತಿವಾದಿಯರ ಕಬ್ಜ ವೈವಾಟಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಆಸ್ತಿಯ 1 ಎಕರೆ 10 ಗುಂಟೆ ಆಸ್ತಿಯು ನಮ್ಮ ಕಬ್ಜ ವೈವಾಟಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ.1ರ ಆಧಾರದ ಮೇಲೆ ಸದರಿ ಆಸ್ತಿಯ ಕಬ್ಜದಲ್ಲಿ ಇರುತ್ತೇವೆ ಎಂದು ಹೇಳುತ್ತೇವೆ. ದಾವಾ ಆಸ್ತಿಯ ಕಬ್ಜದಲ್ಲಿ ಇರುತ್ತೇವೆ ಎಂದು ನಿಪಿ.1ರ ದಾಖಲೆಯಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ 1 ಎಕರೆ 10 ಗುಂಟೆ ಪೂರ್ವಕ್ಕೆ ರಸ್ತೆ ಇರುತ್ತದೆ, ಸದರಿ ರಸ್ತೆ ಹೊಲದಲ್ಲಿ ಮಾಡಿದ ರಸ್ತೆ ಆಗಿರುತ್ತದೆ, ಸರ್ಕಾರಿ ರಸ್ತೆ ಆಗಿರುವುದಿಲ್ಲ. ಸದರಿ ರಸ್ತೆ ಕಚ್ಚ ರಸ್ತೆ ಇರುತ್ತದೆ ಸದರಿ ರಸ್ತೆ ಶಾಶ್ವತ ರಸ್ತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ರಸ್ತೆ ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು

ಮುಂದುವರೆದು ನಿಪಿ.1 ನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1ರ ದಾಖಲೆಯನ್ನು ನಾವೇ ತಯಾರಿಸಿರುತ್ತೇವೆ ಎಂದರೆ ಸಾಕ್ಷಿಯು ನಾವು ಮತ್ತು ಪ್ರತಿವಾದಿಯರು ಸೇರಿ ಮಾಡಿದಂತಹ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಯರ ಉಳಿದ ಜಮೀನು ಇರುತ್ತದೆ, ದಾವಾ ಆಸ್ತಿಯ ದಕ್ಷಿಣಕ್ಕೂ ಸಹ ಪ್ರತಿವಾದಿಯರ ಉಳಿದ ಜಮೀನು ಇರುತ್ತದೆ, ದಾವಾ ಆಸ್ತಿಯ ಉತ್ತರಕ್ಕೆ ಬಾಬು ರಾಘುಬಾ ಪಾಟೀಲರವರ ಹಾಗೂ ಶಂಕರ ಬಾಳು ಪಾಟೀಲರವರ ಜಮೀನು ಇರತ್ತುದೆ. ನಾನು ಈ ಮೇಲೆ ಹೇಳಿದಂತೆ ದಾವಾ ಆಸ್ತಿ RSA No.36/1ರ 12 ಎಕರೆ 25 ಗುಂಟೆ ಕ್ಷೇತ್ರದ ಪೂರ್ವ ದಿಕ್ಕಿಗೆ ಬರುತ್ತದೆ ಎಂದು ಹೇಳಿದ ಚೆಕ್ಕಬಂದಿಯು ಸಹ ಒಂದೇ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಬರುವ ಚಕ್ಕಬಂದಿ ಮತ್ತು ವಾದಪತ್ರದಲ್ಲಿ ಇರುವ ಚಕ್ಕಬಂದಿ ಬೇರೆ ಬೇರೆ ಯಾಗಿರುತ್ತವೆಯಾ ಎಂದರೆ ಸಾಕ್ಷಿಯು ರಸ್ತೆ ಮತ್ತು ಬಾಳು ನಿಂಗಪ್ಪ ಪಾಟೀಲರವರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. RSA No.36/1ರ 12 ಎಕರೆ 25 ಗುಂಟೆಯ ದಕ್ಷಿಣ ಭಾಗಕ್ಕೆ ಶುಭಾಷ ಸೀತರಾಮ ಪಾಟೀಲರವರ ಜಮೀನು ಬರುತ್ತದೆ. ಈ ಮೇಲೆ ಹೇಳಿದ ಚಕ್ಕಬಂದಿ ಹಾಗೂ ಈಗ ಹೇಳುತ್ತಿರುವ ಚಕ್ಕಬಂದಿ ಬೇರೆ ಬೇರೆ ಯಾಗಿರುತ್ತವೆ ಎಂದರೆ ಸಾಕ್ಷಿಯು ಮೊದಲು ನಮ್ಮ ಜಾಗದ ಚಕ್ಕಬಂದಿಯನ್ನು ಹೇಳಿದ್ದು, ಈಗ ಒಟ್ಟು ಕ್ಷೇತ್ರ ಚಕ್ಕಬಂದಿಯನ್ನು ಹೇಳಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೇಳಿದ ಚಕ್ಕಬಂದಿ ಸೃಷ್ಟಿ ಮಾಡಿಕೊಂಡು ಹೇಳಿರುವ ಚಕ್ಕಬಂದಿ ಎಂದರೆ ಸರಿಯಲ್ಲ. ಪರಶುರಾಮ ಲಕ್ಷ್ಮಣ ಪಾಟೀಲರವರ ವಾರಸುದಾರರು ನಾವೇ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಮುಂದೆ ಹಾಜರು ಪಡಿಸುತ್ತೇವೆ ಎಂದು ನುಡಿಯುತ್ತಾರೆ. ನಿಂಗಪ್ಪ ಪಾಟೀಲ ಇರುವ ವಾರಸುದಾರರು ವಾದಿ ನಂ.1 ರಿಂದ 5ನೇದರವರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಈಗ ಹಾಜರು ಪಡಿಸಿರುವುದಿಲ್ಲ ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾವು ವಾರಸುದಾರರು ಆಗದೆ ಇರುವುದರಿಂದ

ಇಲ್ಲಿಯವರೆಗೂ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವಶ್ಯಕತೆ ಇದ್ದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

2. ನಿಪಿ.1ರ ಕರಾರು ಪತ್ರ ಬಾಳಗೌಡ ಯಶವಂತ ಪಾಟೀಲ, ನಾಗೋಜಿ ಯಶವಂತ ಪಾಟೀಲ, ಪ್ರಭಾವತಿ ಮದು ಪಾಟೀಲ, ಕಲ್ಲಪ್ಪ ಮದು ಪಾಟೀಲ, ಸಾಗರ ಮದು ಪಾಟೀಲ, ಸುರೇಶ ಯಶವಂತ ಪಾಟೀಲ ಹಾಗೂ ನಿಂಗಪ್ಪ ಲಕ್ಷ್ಮಣ ಪಾಟೀಲ, ಪರಶುರಾಮ ಲಕ್ಷ್ಮಣ ಪಾಟೀಲ, ದಾಖಲು ಲಕ್ಷ್ಮಣ ಪಾಟೀಲು, ಬಾಬು ಲಕ್ಷ್ಮಣ ಪಾಟೀಲ, ಪಾಂಡುರಂಗ ಲಕ್ಷ್ಮಣ ಪಾಟೀಲ ಮತ್ತು ಕಲ್ಲಪ್ಪ ರಾಮಚಂದ್ರ ಪಾಟೀಲರವರ ಮಧ್ಯೆ ಆಗಿರುತ್ತದೆ. ಈ ಮೇಲೆ ಹೇಳಿದ ಹೆಸರುಗಳಲ್ಲೆವೂ ನಿಪಿ.1ರಲ್ಲಿ ಬರದಂತೆ ತಿಳಿದಿದ್ದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾವೆಲ್ಲರೂ ಎದರುಗಡೆ ಕುಳಿತು ನಿಪಿ.1ನ್ನು ಬರೆಯಾಗಿರುತ್ತದೆ ಎಂದು ನುಡಿಯುತ್ತಾರೆ.

3. ನಿಪಿ.1ರ 1 ಮತ್ತು 2ನೇ ಪುಟದಲ್ಲಿ ಯಾರದು ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಮುಂದಿನ ಪುಟದಲ್ಲಿ ಸಹಿಗಳು ಇರುತ್ತವೆ ಎಂದು ನುಡಿಯುತ್ತಾರೆ. ನಿಪಿ.1ರ ದಾಖಲೆಯನ್ನು ಎಲ್ಲಿ ಮತ್ತು ಯಾರು ಬರೆದಿರುತ್ತಾರೆ ಎಂದು ಸದರಿ ದಾಖಲೆಯಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸಾಕ್ಷಿಯು ಶನಿವಾರಕೂಟದಲ್ಲಿ ಎಂ ಜಿ ಪಾಟೀಲ ವಕೀಲರ ಕಛೇರಿಯಲ್ಲಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಎಂ.ಜಿ.ಪಾಟೀಲ ವಕೀಲರು ಸದರಿ ದಾಖಲೆಯನ್ನು ಬರೆದಿರುತ್ತಾರೆ ಎಂದು ದಸ್ತೂರು ನಮೂದು ಇಲ್ಲ ಎಂದರೆ ಸರಿ. ನಿಪಿ.1ನ್ನು ಬರೆಯಲು ಬಾಂಡ್ ಪೇಪರನ್ನು ನಾವು ಮತ್ತು ಪ್ರತಿವಾದಿಗಳು ಇಬ್ಬರು ಸೇರಿ ತಂದಿರುತ್ತೇವೆ. 100/- ರಾಪಾಯಿಗಳ ಬಾಂಡನ್ನು ಸೊಸೈಟಿಯಿಂದ ತಂದಿರುತ್ತೇವೆ ಯಾವ ಸೊಸೈಟಿ ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡಿಗೆ ನಾವು ಮತ್ತು ಪ್ರತಿವಾದಿಗಳು ಇಬ್ಬರು ಸೇರಿ ಹಣವನ್ನು ಕೊಟ್ಟಿರುತ್ತೇವೆ. ನಾನು ಹೇಳಿದಂತೆ ನಿಪಿ.1ರ ದಾಖಲೆ 100/- ರೂಪಾಯಿ ಬಾಂಡ್ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಬಾಂಡ್ ಅಮೌಂಟನ್ನು ಈಗ ನಾನು ಮರೆತಿರಬಹುದು ಎಂದು ನುಡಿಯುತ್ತಾರೆ. ಸದರಿ ಬಾಂಡನ್ನು

ದಿನಾಂಕಃ 3-07-2015ರಲ್ಲಿ ತೆಗೆದುಕೊಂಡಿರುತ್ತೇವೆ. ನಾವು ಮತ್ತು ಪ್ರತಿವಾದಿಗಳು ಸೇರಿ ಯಾವುದೇ ಬಾಂಡನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**Sd/-**

**2ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**